

# ಕನಸಿನ ಹಾಡಿನಲ್ಲಿ ಸಂಗೀತಾ

ನಟಿ ಸಂಗೀತಾ ಶೃಂಗೇರಿ ಇದೀಗ ಹೊಸ ಪ್ರಯತ್ನದಲ್ಲಿ ತಮ್ಮನ್ನು ನಿರೂಪಿಸಿಕೊಂಡಿದ್ದಾರೆ. ಆಲ್ಬಂ ಸಾಂಗ್‌ವೊಂದರಲ್ಲಿ ಅವರು ಕಾಣಿಸಿಕೊಂಡಿದ್ದು, ಅದು ತಮ್ಮ ಪಾಲಿಗೆ ವಿಶೇಷ ಅನುಭವ ದಕ್ಕಿಸಿಕೊಟ್ಟಿರುವುದಾಗಿ ಹೇಳಿಕೊಂಡಿದ್ದಾರೆ.

ಮೊದಲ ವಿಡಿಯೊ ಸಿಂಗಲ್ ಸಾಂಗ್‌ನಲ್ಲಿ ಅವರು ಕಾಣಿಸಿಕೊಂಡಿದ್ದು, ಬದಲಾವಣೆಗೆ ಇದು ಒಳ್ಳೆಯ ಸಮಯ ಎಂದೂ ಹೇಳಿದ್ದಾರೆ. ಆ ಅನುಭವವನ್ನು ಅವರು ವಿವರಿಸಿರುವುದು ಹೀಗೆ...

‘ನನಗೆ ಯಾವಾಗಲೂ ಅನ್ನಿಸುತ್ತಿತ್ತು, ನನಗಾಗಿ ಕಾದಿರುವ, ನನಗೆಂದೇ ಮುಡುಪಾಗಿರುವ ಹಾಡೊಂದು ಇದೆ ಎಂದು. ಈ ವಿಡಿಯೊ ಹಾಡು ನನ್ನ ಜೀವನದ ಉತ್ತಮ ಸಂಗತಿಯೂ ಹೌದು. ಇದು ಏಕಾಏಕಿಯಾಗಿದ್ದಲ್ಲ ಅಥವಾ ಯೋಜನೆಯನ್ನೇನೂ ಮಾಡಿಕೊಂಡಿರಲಿಲ್ಲ. ಬರಬೇಕಾದ ಸಮಯಕ್ಕೆ ಬಂದಿದೆ’.

ನವೆಂಬರ್ ಕೊನೆಯಲ್ಲಿ ಈ ಹಾಡಿನ ಅವಕಾಶ ಸಂಗೀತಾ ಅವರನ್ನು ಹುಡುಕಿ ಬಂದಿತ್ತು. ಆಲ್ಬಂ ಪಾಪ್ ಸಾಂಗ್ ಅವಕಾಶವನ್ನು ಕೊರಿಯೊಗ್ರಫರ್ ತಾರಕ್ ಇವರತ್ತ ಕೊಂಡುಬಂದಿದ್ದರು. ಈ ಹಾಡಿಗಿಂತ, ಸಂಗೀತಾ ಅವರನ್ನು ಸೆಳೆದದ್ದು ಈ ಹಾಡಿನಾಳದ ಭಾವ.

‘ತಮ್ಮ ಮಗಳು ಕಿಯಾರಾಳ ಯೌವನದ ರೂಪದಲ್ಲಿ ನಾನು ಕಾಣಿಸಿಕೊಳ್ಳುವಂತೆ ತಾರಕ್ ಕೇಳಿದರು. ನನ್ನನ್ನು ಮಗಳಾಗಿ ಒಬ್ಬ ತಂದೆ ನೋಡುವ ಸಂಗತಿಯೇ ಬಹಳ ಹಿಡಿಸಿತು. ಹಾಡಿನ ಕುರಿತ ವಿವರಣೆ ಮುಂದುವರೆದಂತೆ ಇನ್ನೂ ಆಳಕ್ಕೆ ಇಳಿದೆ. ಪಾಪ್ ಸ್ಟಾರ್ ಆಗಲು ಬಯಸುವ ಪುಟ್ಟ ಹುಡುಗಿಯ ಕನಸುಗಳನ್ನು ಈ ಹಾಡು ಒಳಗೊಂಡಿದೆ. ಚಿಕ್ಕವಳಿದ್ದಾಗ ನನಗೂ ಇದೇ ವಿಷಯದಲ್ಲಿ ಕನಸಿತ್ತು. ನನ್ನನ್ನು ನಾನು ವೇದಿಕೆ ಮೇಲಿರುವಂತೆ ಕಲ್ಪಿಸಿಕೊಂಡಿದ್ದೆ. ಹೀಗಾಗಿ ಈ ಕಂಟೆಂಟ್ ನನಗೆ ಬಹಳ ಹತ್ತಿರ ಎನಿಸಿತು. ಹಾಡಿನ ಹಿಂದಿನ ಎಮೋಷನ್ ನನ್ನನ್ನು ಸೆಳೆಯಿತು’ ಎಂದು ವಿವರಿಸಿದ್ದಾರೆ. ವಿಡಿಯೊ ಸಾಂಗ್‌ಗೆ ‘ಬೇಬಿ ಗರ್ಲ್ಸ್ ಡ್ರೀಮ್’ ಎಂಬ ಶೀರ್ಷಿಕೆ ಇಡಲಾಗಿದೆ. ■

# ಮೂರು ಛಾಯೆಗಳ ಪಾತ್ರದಲ್ಲಿ ಧರ್ಮ ಕೀರ್ತಿರಾಜ್

ನಾಯಕನಾಗಿ 25ನೇ ಚಿತ್ರದಲ್ಲಿ ಕಾಣಿಸಿಕೊಳ್ಳಲು ನಟ ಧರ್ಮ ಕೀರ್ತಿರಾಜ್ ಅಣಿಯಾಗಿದ್ದು, ಅವರು ನಟಿಸುತ್ತಿರುವ ಈ ಚಿತ್ರಕ್ಕೆ ‘ನಯನ ಮನೋಹರ’ ಎಂದು ಹೆಸರಿಡಲಾಗಿದೆ. ಈಚೆಗೆ ಚಿತ್ರದ ಶೀರ್ಷಿಕೆ ಹಾಗೂ ಟೀಸರ್ ಬಿಡುಗಡೆಗೊಂಡಿದೆ.

ಈ ಸಂದರ್ಭ ಮಾತನಾಡಿರುವ ಧರ್ಮ ಕೀರ್ತಿರಾಜ್, ‘ನಾಯಕನಾಗಿ ಇದು 25ನೇ ಚಿತ್ರ. ನನ್ನ ಸಿನಿಮಾ ಕರಿಯರ್‌ನಲ್ಲಿ ಈ ಚಿತ್ರ ಒಂದು ಮೈಲಿಗಲ್ಲು ಎನ್ನಬಹುದು. ಈ ಸಿನಿಮಾದಲ್ಲಿ ಮೂರು ಶೇಡ್‌ಗಳಲ್ಲಿ ಕಾಣಿಸಿಕೊಳ್ಳುತ್ತಿದ್ದೇನೆ. ಇದು ನನ್ನ 25ನೇ ಸಿನಿಮಾ ಎನ್ನುವುದು ಒಂದು ವಿಶೇಷ. ಜೊತೆಗೆ ಇದು ನನಗೆ ಹೆಸರು ತಂದುಕೊಡುತ್ತದೆ ಎಂಬ ನಂಬಿಕೆ, ಭರವಸೆಯೂ ಇದೆ. ಸಿನಿಮಾಗೆ ವಾಸುಕಿ ವೈಭವ್ ಅವರ ಸಂಗೀತ ಮತ್ತಷ್ಟು ಮೌಲ್ಯ ತಂದುಕೊಡಲಿದೆ’ ಎಂದು ಭರವಸೆಯ ಮಾತನ್ನಾಡಿದ್ದಾರೆ.

ಈ ಸಂದರ್ಭದಲ್ಲಿ ತಮಗೆ ಮಾರ್ಗದರ್ಶನ ನೀಡಿರುವ ನಟಿ ಪ್ರಿಯಾಂಕಾ ಉಪೇಂದ್ರ ಹಾಗೂ ವಿನೋದ್ ಪ್ರಭಾಕರ್ ಅವರ ಬೆಂಬಲವನ್ನೂ ಸ್ಮರಿಸಿದ್ದಾರೆ. ಪುನೀತ್ ಕೆ.ಜಿ.ಆರ್. ಚೊಚ್ಚಲ ನಿರ್ದೇಶನದ ಚಿತ್ರ ಇದಾಗಿದೆ. ಧರ್ಮ ಕೀರ್ತಿರಾಜ್ ನಟನೆಯ ರೂಮ್ ನಂ. 111 ಸಿನಿಮಾ ಈಚೆಗೆ ತೆರೆಕಂಡಿತ್ತು. ಕನ್ನಡದೊಂದಿಗೆ ತೆಲುಗು ಸಿನಿಮಾದಲ್ಲಿಯೂ ಸಕ್ರಿಯರಾಗಿದ್ದಾರೆ ಅವರು. ■

